ಈತನ ಒಂದು ರೂಪಾಯಿ ವಿಚಾರ, ಸಿಐಡಿ ಮತ್ತಿತರ ವಿಚಾರಗಳ ಬಗ್ಗೆ ಚರ್ಚೆ ಆಗುತ್ತಿತ್ತು.

ಹೀಗೆ ಇರುವಾಗ ಒಂದು ಸಾರಿ ಚಿಲ್ಲರೆಯ ತೀವ್ರ ಅಭಾವ ಉಂಟಾಯಿತು. ಬ್ಯಾಂಕ್‌ಗಳಲ್ಲಿ ಕೂಡಾ ಬೇಡಿಕೆಯಷ್ಟು ಚಿಲ್ಲರೆಗಳು ಸಿಗುತ್ತಿರಲಿಲ್ಲ. ಎಲ್ಲ ಕಡೆ ಚಿಲ್ಲರೆ ಸಮಸ್ಯೆ ಉಂಟಾಗಿದ್ದರಿಂದ ಆಟೊ, ಕಾರು, ಸರ್ವಿಸ್ ಟೆಂಪೊ, ಜೀಪುಗಳಿಗೂ ತೊಂದರೆಯಾಗತೊಡಗಿತು. ಅಂಗಡಿಯವರು ಚಿಲ್ಲರೆ ಇಲ್ಲ ಎಂದು ಚಾಕ್ಲೇಟು ಕೊಟ್ಟು ಪರಿಸ್ಥಿತಿ ನಿಭಾಯಿಸುತ್ತಿದ್ದರು. ಬಸ್ ಕಂಡಕ್ಟರ್‌ಗಳಿಗೆ ಚಿಲ್ಲರೆ ಅತಿ ದೊಡ್ಡ ಸಮಸ್ಯೆಯಾಯಿತು. ಆಗ ನೆನಪಿಗೆ ಬಂದಿದ್ದು ಹಾಟ್‌ಮಿಟ್ಲೆ.

ಹಾಟ್‌ಮಿಟ್ಲೆ ಏಳೆಂಟು ವರ್ಷಗಳಿಂದ ಒಂದೊಂದು ರೂಪಾಯಿ ಸಂಗ್ರಹಿಸುತ್ತಿದ್ದಾನೆ. ಪ್ರತಿವಾರ ಕನಿಷ್ಠ 300 ರೂಪಾಯಿ ಸಂಗ್ರಹವಾಗುತ್ತಿತ್ತು. ಅದರಲ್ಲಿ ಸುಮಾರು 50 ರೂಪಾಯಿಯಷ್ಟೇ ಪ್ರತಿವಾರದ ತಿಂಡಿಗೆ ಹೋಗುತ್ತಿತ್ತು. ವರ್ಷಕ್ಕೆ ಕನಿಷ್ಠ 13 ಸಾವಿರ ರೂಪಾಯಿ ಸಂಗ್ರಹವಾಗುತ್ತಿತ್ತು. ಅದು ಎಂಟು ವರ್ಷ ಅಂದ್ರೆ ಲಕ್ಷ ಮೀರುತ್ತದೆ. ಆದರೆ ಅಷ್ಟು ಚಿಲ್ಲರೆಯ ಗಂಟನ್ನು ಹೊತ್ತುಕೊಂಡು ತಿರುಗಲು ಸಾಧ್ಯವೇ? ಅಲ್ಲದೇ ಒಂದು ಬಾರಿಯೂ ಹಾಟ್‌ಮಿಟ್ಲೆಯ ಕಟ್ಟು ದೊಡ್ಡದಾಗಿದ್ದನ್ನು ಯಾರೂ ಕಂಡಿಲ್ಲ.

ಖಾಸಗಿ ಬಸ್ಸಿನ ಒಂದಿಬ್ಬರು ಕಂಡಕ್ಟರ್‌ಗಳು ಹಾಟ್‌ಮಿಟ್ಲೆಯಲ್ಲಿ ಚಿಲ್ಲರೆ ಸಿಗುವುದೇ ಎಂದು ಬಿಳಲೂರಿಗೆ ಬಂದು ಸುತ್ತಮುತ್ತಲಿನ ಅಂಗಡಿಯವರಲ್ಲಿ ಚರ್ಚೆ ನಡೆಸಿ ಹೋಗಿದ್ದರು. ಇಲ್ಲಿಯವರೆಗೆ ಹಾಟ್‌ಮಿಟ್ಲೆ ಚಿಲ್ಲರೆ ಏನು ಮಾಡುತ್ತಾನೆ ಎಂದು ಒಬ್ಬರೂ ತಲೆ ಕೆಡಿಸಿಕೊಂಡಿರಲಿಲ್ಲ. ಈ ಕಂಡಕ್ಟರ್‌ಗಳ ದೆಸೆಯಿಂದ ಇವರ ತಲೆಗೆ ಹುಳ ಬಿಟ್ಟಂಗಾಯಿತು. ಹಿಂದೆ ಆಗಿದ್ದರೆ ಜೋರು ಮಾಡಿ ನೋಡುತ್ತಿದ್ದರೋ ಏನೋ. ಅಥವಾ ಚಿಲ್ಲರೆ ಎಲ್ಲಿದೆ ಎಂದು ಗೊತ್ತಾಗಿದ್ದರೆ ಲಪಟಾಯಿಸಿಕೊಂಡು ಹೋಗುತ್ತಿದ್ದರೋ ಏನೋ. ಈಗ ಸಿಐಡಿ ಎಂಬ ಹಣೆಪಟ್ಟಿ ಇರುವುದರಿಂದ ಜೋರು ಮಾಡುವುದಾಗಲಿ, ಎಲ್ಲಿದೆ ಎಂದು ಹುಡುಕುವುದಕ್ಕಾಗಲಿ ಧೈರ್ಯ ಸಾಲುತ್ತಿರಲಿಲ್ಲ.

ಕೊನೆಗೆ ಹಾಟ್‌ಮಿಟ್ಲೆಯನ್ನು ಮೂರ್ನಾಲ್ಕು ಅಂಗಡಿಯವರು, ಎರಡು ಹೋಟೆಲ್‌ನವರು ಒಟ್ಟಿಗೆ ಭೇಟಿಯಾಗಿ, 'ಬಸ್ ಕಂಡಕ್ಟರ್‌ಗಳಿಗೆ ಚಿಲ್ಲರೆಬೇಕಂತೆ. ನೋಟು ಕೊಟ್ಟು ಕೊಂಡೋಗುತ್ತಾರಂತೆ' ಎಂದು ಹೇಳಿದರು. ಇವರ ಮಾತುಗಳ ಕಡೆಗೆ ಗಮನ ಹರಿಸದ ರೀತಿಯಲ್ಲಿ ಎಲ್ಲೋ ನೋಡುತ್ತಾ, ನಗುತ್ತಾ ಹಾಟ್‌ಮಿಟ್ಲೆ ಕುಳಿತಿದ್ದ. ತಮ್ಮ ಮಾತು ಗಾಳಿಯಲ್ಲಿ ತೇಲಿ ಹೋಗುತ್ತಿದೆ ವಿನಃ ಈತನ ಮೇಲೆ ಯಾವುದೇ ಪರಿಣಾಮ ಬೀರುತ್ತಿಲ್ಲ ಎಂದುಕೊಂಡರು. ಇನ್ನು ಹೇಳಿ ಪ್ರಯೋಜನವಿಲ್ಲ ಎಂದು ಹೊರಡಲು ಅನುವಾಗುತ್ತಿದ್ದಂತೆ ಹಾಟ್‌ಮಿಟ್ಲೆ ಬಾಯಿತೆರೆದ. 'ನಾಳೆ ಬರಲಿ. ಹತ್ತು ರೂಪಾಯಿಗಳ ನೋಟು ಮಾತ್ರ' ಎಂಬ ಐದು ಶಬ್ದಗಳನ್ನು ಹೊರಹಾಕಿದ. ನಂತರ ಏನೂ ಹೇಳದೆ ಮೊದಲಿನಂತೆ ಆಕಾಶದ ಕಡೆಗೆ ನೋಡುತ್ತಾ ಕೂತ. ಈ ಐದು ಶಬ್ದಗಳು ಅವರಿಗೆ ಸಾಕಾದವು. ತಮ್ಮೊಳಗೆ ಮಾತನಾಡಿಕೊಳ್ಳುತ್ತಾ ಹೋದರು.

'ಚಿಲ್ಲರೆ ಬೇಕಾದವರು 10 ರೂಪಾಯಿಯ ನೋಟುಗಳನ್ನು ಹಿಡಿದುಕೊಂಡು ಬಂದು ಚಿಲ್ಲರೆ ತಗೊಂಡು ಹೋಗಬಹುದು' ಎಂಬ ಸಂದೇಶ ಬಸ್ ಕಂಡಕ್ಟರ್‌ಗಳಿಗೆ ಮುಟ್ಟಿತು. ಚಿಲ್ಲರೆ ಕೇಳಿಕೊಂಡು ಮೊದಲು ಬಂದ ಇಬ್ಬರ ಜತೆ ಮತ್ತಿಬ್ಬರು ಸೇರಿಕೊಂಡು ಬಿಳಲೂರಿಗೆ ಬಂದರು. ಅಂಗಡಿ, ಹೋಟೆಲ್‌ನವರ ಜತೆಗೆ ಹಾಟ್‌ಮಿಟ್ಲೆ ಬಳಿ ತೆರಳಿದರು. 'ಹಾಟ್‌ಮಿಟ್ಲೆ ಚಿಲ್ಲರೆ ಬೇಕಿತ್ತು' ಎಂದು ಒಬ್ಬರು ಹೇಳುವುದೇ ತಡ. ಒಂದು ಕಟ್ಟು ತೆಗೆದು ಮುಂದಿಟ್ಟು, 'ಒಂದು ಸಾವಿರ' ಅಂತಂದು ಸುಮ್ಮನಾದ. ಐನೂರು ಐನೂರರ ಚಿಲ್ಲರೆ ಒಯ್ಯಲು ಅವರು ಬಂದಿದ್ದರು.